UNIVERSAL
PRE-UNIVERSITY COLLEGE
Koluru, Lakkayanapalya, Tavarekere Hobli, Ramohalli Post, Bengaluru, Karnataka 560074
www.universalinstitutions.com +91 63668 16611 | +91 96866 64985

KANNADA HABBA 2026

INTER-COLLEGIATE DANCE COMPETITION

THEME:KARNATAKA JANAPADA VAIBHAVA

RULES AND REGULATIONS

1. Eligibility and Registration

1. The competition is open to bona fide Pre-University (PU) students of recognised colleges.
2. Every participant must carry a valid college identity card along with a consent letter duly signed and stamped by the Principal, containing the names of all participating students from the respective institution
3. Registration fee: ₹500 per team.
4. Only registered participants will be permitted to perform.
5. Team details and participant names must be submitted before the registration deadline.
6. Each team must consist of a minimum of 2 and a maximum of 8 participants.

2. Performance Duration

1. Maximum Duration: 4–6 minutes per team, including stage setup and performance. The total allotted time must not exceed 6 minutes.
2. Exceeding the prescribed time limit may result in deduction of marks or disqualification.
3. No additional time will be provided for stage preparation or special arrangements.

3. Stage and Facilities

1. The organising institution will provide ONLY the designated performance stage/platform.
2. No additional stage decorations, platforms, backdrops, sets, equipment or special arrangements will be provided.
3. All teams must perform using the existing stage setup.
4. No team may alter, modify, decorate or attach anything to the stage.
5. The stage must be left clean and undamaged after every performance.

4. Strict Prohibition of Props and Special Effects

The following are strictly prohibited, even if brought or arranged by a participating team:

1. Smoke machines, fog machines, dry ice or artificial mist.
2. Fire, flames, candles, fireworks, sparklers or pyrotechnics.
3. Coloured powders, gulal, glitter, confetti.
4. Water, liquids, oils, sprays, foam, bubbles or any substance that may make the stage slippery.
6. Additional LED lights, laser lights, strobe lights, special lighting equipment or electronic visual effects.

5. Costumes and Accessories

1. Participants may wear costumes appropriate to the dance theme.
2. Normal costume jewellery and securely attached costume accessories are permitted.
4. Costumes must be decent, safe and suitable for an educational institution.
5. Costumes must not create litter, obstruct movement or damage the stage.
6. Participants are responsible for their own props and belongings. The institution shall not be liable for any loss or damage

6. Music Regulations

1. Teams must submit their final music track in MP3 format 4 days before the competition, as directed by the organisers.
2. Every team must carry a backup copy of its music track.
3. Songs must be appropriate for a student audience and comply with the announced competition theme.
4. Obscene, offensive, discriminatory or inappropriate lyrics are strictly prohibited.
5. Last-minute modifications to the music track may not be entertained.

7. Performance and Safety Regulations

1. Dangerous stunts, risky lifts, aerial acrobatics or unsafe human formations are not permitted.
2. Participants must remain within the designated performance area.
3. No outside dancers, professional performers or unregistered individuals may participate.
4. Performances must not contain vulgar gestures, offensive representations or disrespectful content.
5. Participants must maintain discipline and respect towards competing teams, judges and organisers.

8. Reporting and Stage Management

1. All teams must report at the time announced by the organising committee.
2. Teams must be ready to perform when their names are called.

3. No additional time will be allowed for setting up or clearing equipment.
4. Teams failing to report when called may lose their performance opportunity.
5. Entry and exit from the stage must be orderly and prompt.

9. Judging Criteria

Criteria	Marks
Choreography and Creativity	10
Coordination and Synchronisation	10
Expressions and Presentation	10
Rhythm and Musical Interpretation	10
Costume Suitability and Stage Utilisation	05
Theme Representation and Cultural Relevance	05
TOTAL	50

10. Disqualification

A team may be immediately disqualified for:

1. Using prohibited props, smoke, fire, special effects or other restricted materials.
2. Performing dangerous stunts or creating safety hazards.
3. Damaging institutional property.
4. Misbehaviour with organisers, judges or other participants.
5. Violating eligibility requirements or repeatedly disregarding event instructions.
6. Performing content that is inappropriate or contrary to the competition rules.
7. Any song lyrics, dialogues, gestures, costumes, or performances that insult, demean, provoke hatred, or hurt the religious, cultural, regional, or national sentiments of any community, State, or the Nation are strictly prohibited.

   Any violation will result in immediate disqualification. **The organising institution reserves the right to initiate appropriate legal proceedings against the participants** and/or their respective institutions, in accordance with applicable law.

   The decision of the Organising Committee shall be final regarding disqualification.

11. Judges' Decision

1. The decision of the appointed judges shall be final and binding.
2. No disputes, arguments or requests to alter the judges' scores will be entertained.
3. The organising committee reserves the right to stop any performance that violates competition rules.

12. General Instructions

1. Participating institutions are responsible for their students' discipline and conduct.
2. Participants are responsible for arranging their costumes, travel and personal requirements.
3. The organisers will not be responsible for the loss of personal belongings.
4. Participants will be liable for damage caused to stage property or equipment.
5. The organising committee reserves the right to modify the event schedule for operational or safety reasons.

Competition Prizes

FIRST PRIZE ₹10,000 SECOND PRIZE ₹6,000 THIRD PRIZE ₹3,000

Mandatory Declaration

By registering for the competition, the participating college and its team members confirm that they have read, understood and agreed to comply with all rules and regulations.

Winning earns a trophy. Participation builds a champion.

UNIVERSAL
PRE-UNIVERSITY COLLEGE

Koluru, Lakkayanapalya, Tavarekere Hobli, Ramohalli Post, Bengaluru, Karnataka 560074
www.universalinstitutions.com +91 63668 16611 | +91 96866 64985

ಕನ್ನಡ ಹಬ್ಬ 2026

ಅಂತರ ಕಾಲೇಜು ನೃತ್ಯ ಸ್ಪರ್ಧೆ

ವಿಷಯ (THEME): ಕರ್ನಾಟಕ ಜನಪದ ವೈಭವ

ಕರ್ನಾಟಕದ ಶ್ರೀಮಂತ ಜನಪದ ಕಲೆ, ಸಂಸ್ಕೃತಿ, ಪರಂಪರೆ ಮತ್ತು ನಾಡಿನ ಸೊಗಡಿನ ಸಂಭ್ರಮ!

ನಿಯಮಗಳು ಮತ್ತು ನಿಬಂಧನೆಗಳು

1. ಅರ್ಹತೆ ಮತ್ತು ನೋಂದಣಿ

1. ಈ ಸ್ಪರ್ಧೆಯಲ್ಲಿ ಮಾನ್ಯತೆ ಪಡೆದ ಪದವಿ ಪೂರ್ವ (PU) ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಭಾಗವಹಿಸಲು ಅರ್ಹರಾಗಿರುತ್ತಾರೆ.
2. ಪ್ರತಿಯೊಬ್ಬ ಸ್ಪರ್ಧಿಯು ಮಾನ್ಯವಾದ ಕಾಲೇಜು ಗುರುತಿನ ಚೀಟಿಯನ್ನು ಹೊಂದಿರಬೇಕು. ಜೊತೆಗೆ, ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಸಹಿ ಮತ್ತು ಅಧಿಕೃತ ಮುದ್ರೆಯಿರುವ, ಭಾಗವಹಿಸುವ ಎಲ್ಲ ವಿದ್ಯಾರ್ಥಿಗಳ ಹೆಸರುಗಳನ್ನು ಒಳಗೊಂಡ ಅನುಮತಿ ಪತ್ರವನ್ನು ಕಡ್ಡಾಯವಾಗಿ ತರಬೇಕು.
3. ನೋಂದಣಿ ಶುಲ್ಕ: ಪ್ರತಿ ತಂಡಕ್ಕೆ ₹500.
4. ನೋಂದಾಯಿತ ವಿದ್ಯಾರ್ಥಿಗಳಿಗೆ ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.
5. ನೋಂದಣಿಯ ಕೊನೆಯ ದಿನಾಂಕದೊಳಗೆ ತಂಡದ ವಿವರಗಳು ಮತ್ತು ಭಾಗವಹಿಸುವ ವಿದ್ಯಾರ್ಥಿಗಳ ಹೆಸರುಗಳನ್ನು ಸಲ್ಲಿಸಬೇಕು.
6. ಪ್ರತಿ ತಂಡದಲ್ಲಿ ಕನಿಷ್ಠ 2 ಮತ್ತು ಗರಿಷ್ಠ 8 ವಿದ್ಯಾರ್ಥಿಗಳು ಇರಬೇಕು.

2. ನೃತ್ಯ ಪ್ರದರ್ಶನದ ಅವಧಿ

1. ಪ್ರತಿ ತಂಡಕ್ಕೆ ವೇದಿಕೆ ಸಿದ್ಧತೆ ಮತ್ತು ನೃತ್ಯ ಪ್ರದರ್ಶನ ಸೇರಿ ಒಟ್ಟು ಗರಿಷ್ಠ 6 ನಿಮಿಷಗಳ ಕಾಲಾವಕಾಶವಿರುತ್ತದೆ. ನೃತ್ಯ ಪ್ರದರ್ಶನದ ನಿಗದಿತ ಅವಧಿ 4–6 ನಿಮಿಷಗಳು.
2. ನಿಗದಿತ ಸಮಯವನ್ನು ಮೀರಿದಲ್ಲಿ ಅಂಕಗಳನ್ನು ಕಡಿತಗೊಳಿಸಬಹುದು ಅಥವಾ ತಂಡವನ್ನು ಅನರ್ಹಗೊಳಿಸಬಹುದು.
3. ವೇದಿಕೆ ಸಿದ್ಧತೆ ಅಥವಾ ವಿಶೇಷ ವ್ಯವಸ್ಥೆಗಳಿಗೆ ಹೆಚ್ಚುವರಿ ಸಮಯ ನೀಡಲಾಗುವುದಿಲ್ಲ.

3. ವೇದಿಕೆ ಮತ್ತು ಸೌಲಭ್ಯಗಳು

1. ಆಯೋಜಕ ಸಂಸ್ಥೆಯು ನೃತ್ಯ ಪ್ರದರ್ಶನಕ್ಕಾಗಿ ನಿಗದಿಪಡಿಸಿದ ವೇದಿಕೆಯನ್ನು ಮಾತ್ರ ಒದಗಿಸುತ್ತದೆ.
2. ಹೆಚ್ಚುವರಿ ವೇದಿಕೆ ಅಲಂಕಾರ, ವೇದಿಕೆಯ ಮೇಲಿನ ವಿಶೇಷ ರಚನೆಗಳು, ಹಿನ್ನೆಲೆ ಪರದೆಗಳು, ಸೆಟ್‌ಗಳು, ಉಪಕರಣಗಳು ಅಥವಾ ಇತರ ವಿಶೇಷ ವ್ಯವಸ್ಥೆಗಳನ್ನು ಒದಗಿಸಲಾಗುವುದಿಲ್ಲ.
3. ಎಲ್ಲಾ ತಂಡಗಳು ಲಭ್ಯವಿರುವ ವೇದಿಕೆಯ ವ್ಯವಸ್ಥೆಯನ್ನೇ ಬಳಸಿಕೊಂಡು ಪ್ರದರ್ಶನ ನೀಡಬೇಕು.
4. ಯಾವುದೇ ತಂಡವು ವೇದಿಕೆಯಲ್ಲಿ ಬದಲಾವಣೆ ಮಾಡುವುದು, ಅಲಂಕರಿಸುವುದು ಅಥವಾ ಯಾವುದೇ ವಸ್ತುವನ್ನು ಅಳವಡಿಸುವುದನ್ನು ನಿಷೇಧಿಸಲಾಗಿದೆ.
5. ಪ್ರತಿ ಪ್ರದರ್ಶನದ ನಂತರ ವೇದಿಕೆಯನ್ನು ಸ್ವಚ್ಛವಾಗಿ ಹಾಗೂ ಯಾವುದೇ ಹಾನಿಯಾಗದಂತೆ ಬಿಡಬೇಕು.

4. ನಿಷೇಧಿತ ಪರಿಕರಗಳು ಮತ್ತು ವಿಶೇಷ ಪರಿಣಾಮಗಳು

ಭಾಗವಹಿಸುವ ತಂಡಗಳು ಸ್ವತಃ ತಂದಿದ್ದರೂ ಅಥವಾ ವ್ಯವಸ್ಥೆ ಮಾಡಿಕೊಂಡಿದ್ದರೂ ಕೆಳಗಿನ ವಸ್ತುಗಳ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

1. ಹೊಗೆ ಯಂತ್ರಗಳು, ಮಂಜು ಉತ್ಪಾದಿಸುವ ಯಂತ್ರಗಳು, ಡ್ರೈ ಐಸ್ ಅಥವಾ ಕೃತಕ ಮಂಜು.
2. ಬೆಂಕಿ, ಜ್ವಾಲೆಗಳು, ಮೇಣದಬತ್ತಿಗಳು, ಪಟಾಕಿಗಳು, ಕಿಡಿ ಉತ್ಪಾದಿಸುವ ವಸ್ತುಗಳು ಅಥವಾ ಯಾವುದೇ ರೀತಿಯ ಅಗ್ನಿ ಆಧಾರಿತ ವಿಶೇಷ ಪರಿಣಾಮಗಳು.
3. ಬಣ್ಣದ ಪುಡಿಗಳು, ಗುಲಾಲ್, ಗ್ಲಿಟರ್ ಅಥವಾ ಕಾಗದದ ಚೂರುಗಳು (ಕಾನ್ಫೆಟ್ಟಿ).

4. ನೀರು, ದ್ರವ ಪದಾರ್ಥಗಳು, ಎಣ್ಣೆ, ಸ್ಪ್ರೇ, ನೊರೆ, ಗುಳ್ಳೆಗಳು ಅಥವಾ ವೇದಿಕೆಯನ್ನು ಜಾರುವಂತೆ ಮಾಡುವ ಯಾವುದೇ ವಸ್ತುಗಳು.
5. ಹೆಚ್ಚುವರಿ LED ದೀಪಗಳು, ಲೇಸರ್ ದೀಪಗಳು, ಸ್ಟ್ರೋಬ್ ದೀಪಗಳು, ವಿಶೇಷ ಬೆಳಕಿನ ಉಪಕರಣಗಳು ಅಥವಾ ಎಲೆಕ್ಟ್ರಾನಿಕ್ ದೃಶ್ಯ ಪರಿಣಾಮಗಳು.

5. ವೇಷಭೂಷಣ ಮತ್ತು ಆಭರಣಗಳು

1. ನೃತ್ಯದ ವಿಷಯ ಮತ್ತು ಶೈಲಿಗೆ ಸೂಕ್ತವಾದ ವೇಷಭೂಷಣಗಳನ್ನು ಧರಿಸಬಹುದು.
2. ಸಾಮಾನ್ಯ ವೇಷಭೂಷಣದ ಆಭರಣಗಳು ಹಾಗೂ ಸುರಕ್ಷಿತವಾಗಿ ಅಳವಡಿಸಲಾದ ಅಲಂಕಾರಿಕ ಪರಿಕರಗಳನ್ನು ಬಳಸಬಹುದು.
3. ವೇಷಭೂಷಣಗಳು ಸಭ್ಯವಾಗಿರಬೇಕು, ಸುರಕ್ಷಿತವಾಗಿರಬೇಕು ಮತ್ತು ಶಿಕ್ಷಣ ಸಂಸ್ಥೆಯ ವಾತಾವರಣಕ್ಕೆ ಹೊಂದಿಕೆಯಾಗಿರಬೇಕು.
4. ವೇಷಭೂಷಣಗಳಿಂದ ಕಸ ಉಂಟಾಗಬಾರದು, ನೃತ್ಯದ ಚಲನೆಗೆ ಅಡ್ಡಿಯಾಗಬಾರದು ಅಥವಾ ವೇದಿಕೆಗೆ ಹಾನಿಯಾಗಬಾರದು.
5. ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಪರಿಕರಗಳು ಮತ್ತು ವೈಯಕ್ತಿಕ ವಸ್ತುಗಳ ಸುರಕ್ಷತೆಗೆ ತಾವೇ ಜವಾಬ್ದಾರರಾಗಿರುತ್ತಾರೆ. ಅವುಗಳ ನಷ್ಟ ಅಥವಾ ಹಾನಿಗೆ ಆಯೋಜಕ ಸಂಸ್ಥೆಯು ಜವಾಬ್ದಾರಿಯಾಗಿರುವುದಿಲ್ಲ.

6. ಸಂಗೀತಕ್ಕೆ ಸಂಬಂಧಿಸಿದ ನಿಯಮಗಳು

1. ಎಲ್ಲಾ ತಂಡಗಳು ಸ್ಪರ್ಧೆಗೆ 4 ದಿನಗಳ ಮುಂಚಿತವಾಗಿ ತಮ್ಮ ಅಂತಿಮ ಸಂಗೀತದ ಧ್ವನಿಮುದ್ರಿಕೆಯನ್ನು MP3 ರೂಪದಲ್ಲಿ ಆಯೋಜಕರ ಸೂಚನೆಯಂತೆ ಸಲ್ಲಿಸಬೇಕು.
2. ಪ್ರತಿಯೊಂದು ತಂಡವು ತನ್ನ ಸಂಗೀತದ ಹೆಚ್ಚುವರಿ ಪ್ರತಿಯನ್ನು (Backup Copy) ಕಡ್ಡಾಯವಾಗಿ ತರಬೇಕು.
3. ಆಯ್ಕೆ ಮಾಡಿದ ಹಾಡುಗಳು ವಿದ್ಯಾರ್ಥಿಗಳಿಗೆ ಸೂಕ್ತವಾಗಿರಬೇಕು ಹಾಗೂ ಸ್ಪರ್ಧೆಯ ನಿಗದಿತ ವಿಷಯಕ್ಕೆ ಹೊಂದಿಕೆಯಾಗಿರಬೇಕು.
4. ಅಶ್ಲೀಲ, ಆಕ್ಷೇಪಾರ್ಹ, ತಾರತಮ್ಯಪೂರಿತ ಅಥವಾ ಅನುಚಿತ ಸಾಹಿತ್ಯ ಹೊಂದಿರುವ ಹಾಡುಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.
5. ಕೊನೆಯ ಕ್ಷಣದಲ್ಲಿ ಸಂಗೀತದಲ್ಲಿ ಬದಲಾವಣೆ ಮಾಡುವ ಮನವಿಗಳನ್ನು ಪರಿಗಣಿಸದೇ ಇರಬಹುದು.

7. ಪ್ರದರ್ಶನ ಮತ್ತು ಸುರಕ್ಷತಾ ನಿಯಮಗಳು

1. ಅಪಾಯಕಾರಿ ಸಾಹಸಗಳು, ಸುರಕ್ಷತೆಯಿಲ್ಲದ ಎತ್ತುವಿಕೆಗಳು, ವೈಮಾನಿಕ ಸಾಹಸಗಳು ಅಥವಾ ಅಪಾಯಕಾರಿ ಮಾನವ ರಚನೆಗಳನ್ನು ನಿಷೇಧಿಸಲಾಗಿದೆ.

2. ಸ್ಪರ್ಧಿಗಳು ನಿಗದಿಪಡಿಸಿದ ವೇದಿಕೆಯ ವ್ಯಾಪ್ತಿಯೊಳಗೆ ಮಾತ್ರ ಪ್ರದರ್ಶನ ನೀಡಬೇಕು.
3. ಹೊರಗಿನ ನೃತ್ಯಗಾರರು, ವೃತ್ತಿಪರ ಕಲಾವಿದರು ಅಥವಾ ನೋಂದಾಯಿಸದ ವ್ಯಕ್ತಿಗಳಿಗೆ ಪ್ರದರ್ಶನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
4. ನೃತ್ಯ ಪ್ರದರ್ಶನದಲ್ಲಿ ಅಶ್ಲೀಲ ಸನ್ನೆಗಳು, ಆಕ್ಷೇಪಾರ್ಹ ಅಭಿವ್ಯಕ್ತಿಗಳು ಅಥವಾ ಅಗೌರವ ತೋರಿಸುವ ಯಾವುದೇ ಅಂಶಗಳು ಇರಬಾರದು.
5. ಸ್ಪರ್ಧಿಗಳು ಇತರ ತಂಡಗಳು, ತೀರ್ಪುಗಾರರು ಮತ್ತು ಆಯೋಜಕರೊಂದಿಗೆ ಶಿಸ್ತು ಹಾಗೂ ಗೌರವದಿಂದ ವರ್ತಿಸಬೇಕು.

8. ವರದಿ ಮಾಡುವಿಕೆ ಮತ್ತು ವೇದಿಕೆ ನಿರ್ವಹಣೆ

1. ಎಲ್ಲಾ ತಂಡಗಳು ಆಯೋಜನಾ ಸಮಿತಿಯು ತಿಳಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು.
2. ತಮ್ಮ ತಂಡದ ಹೆಸರನ್ನು ಕರೆಯುವಾಗ ಪ್ರದರ್ಶನ ನೀಡಲು ಸಿದ್ಧರಾಗಿರಬೇಕು.
3. ವೇದಿಕೆಯಲ್ಲಿ ಉಪಕರಣಗಳನ್ನು ಅಳವಡಿಸಲು ಅಥವಾ ತೆರವುಗೊಳಿಸಲು ಹೆಚ್ಚುವರಿ ಸಮಯ ನೀಡಲಾಗುವುದಿಲ್ಲ.
4. ಕರೆ ನೀಡಿದಾಗ ಹಾಜರಾಗದ ತಂಡವು ಪ್ರದರ್ಶನದ ಅವಕಾಶವನ್ನು ಕಳೆದುಕೊಳ್ಳಬಹುದು.
5. ವೇದಿಕೆಗೆ ಪ್ರವೇಶಿಸುವುದು ಮತ್ತು ನಿರ್ಗಮಿಸುವುದು ಶಿಸ್ತಿನಿಂದ ಹಾಗೂ ತ್ವರಿತವಾಗಿ ನಡೆಯಬೇಕು.

9. ತೀರ್ಪುಗಾರಿಕೆಯ ಮಾನದಂಡಗಳು

ಮೌಲ್ಯಮಾಪನದ ಮಾನದಂಡಗಳು	ಅಂಕಗಳು
ನೃತ್ಯ ಸಂಯೋಜನೆ ಮತ್ತು ಸೃಜನಶೀಲತೆ	10
ತಂಡದ ಸಮನ್ವಯ ಮತ್ತು ಏಕಕಾಲಿಕ ಚಲನೆ	10
ಭಾವಾಭಿವ್ಯಕ್ತಿ ಮತ್ತು ಪ್ರಸ್ತುತಿ	10
ಲಯ ಮತ್ತು ಸಂಗೀತದ ಅರ್ಥಪೂರ್ಣ ಅಭಿವ್ಯಕ್ತಿ	10
ವೇಷಭೂಷಣದ ಸೂಕ್ತತೆ ಮತ್ತು ವೇದಿಕೆಯ ಬಳಕೆ	05
ವಿಷಯದ ಅಭಿವ್ಯಕ್ತಿ ಮತ್ತು ಸಾಂಸ್ಕೃತಿಕ ಪ್ರಸ್ತುತತೆ	05
ಒಟ್ಟು ಅಂಕಗಳು	50

10. ಅನರ್ಹತೆ

ಕೆಳಗಿನ ಯಾವುದೇ ನಿಯಮವನ್ನು ಉಲ್ಲಂಘಿಸಿದಲ್ಲಿ ತಂಡವನ್ನು ತಕ್ಷಣವೇ ಸ್ಪರ್ಧೆಯಿಂದ ಅನರ್ಹಗೊಳಿಸಬಹುದು.

1. ನಿಷೇಧಿತ ಪರಿಕರಗಳು, ಹೊಗೆ, ಬೆಂಕಿ, ವಿಶೇಷ ಪರಿಣಾಮಗಳು ಅಥವಾ ನಿರ್ಬಂಧಿತ ವಸ್ತುಗಳನ್ನು ಬಳಸುವುದು.
2. ಅಪಾಯಕಾರಿ ಸಾಹಸಗಳನ್ನು ಪ್ರದರ್ಶಿಸುವುದು ಅಥವಾ ಸುರಕ್ಷತೆಗೆ ಧಕ್ಕೆ ಉಂಟುಮಾಡುವುದು.
3. ಸಂಸ್ಥೆಯ ಆಸ್ತಿಪಾಸ್ತಿಗೆ ಹಾನಿ ಉಂಟುಮಾಡುವುದು.
4. ಆಯೋಜಕರು, ತೀರ್ಪುಗಾರರು ಅಥವಾ ಇತರ ಸ್ಪರ್ಧಿಗಳೊಂದಿಗೆ ಅನುಚಿತವಾಗಿ ವರ್ತಿಸುವುದು.
5. ಅರ್ಹತಾ ನಿಯಮಗಳನ್ನು ಉಲ್ಲಂಘಿಸುವುದು ಅಥವಾ ಆಯೋಜಕರ ಸೂಚನೆಗಳನ್ನು ಪದೇಪದೇ ನಿರ್ಲಕ್ಷಿಸುವುದು.
6. ಸ್ಪರ್ಧೆಯ ನಿಯಮಗಳಿಗೆ ವಿರುದ್ಧವಾದ ಅಥವಾ ಅನುಚಿತ ವಿಷಯಗಳನ್ನು ಪ್ರದರ್ಶಿಸುವುದು.
7. ಯಾವುದೇ ಸಮುದಾಯ, ರಾಜ್ಯ ಅಥವಾ ರಾಷ್ಟ್ರದ ಧಾರ್ಮಿಕ, ಸಾಂಸ್ಕೃತಿಕ, ಪ್ರಾದೇಶಿಕ ಅಥವಾ ರಾಷ್ಟ್ರೀಯ ಭಾವನೆಗಳಿಗೆ ಅವಮಾನ ಮಾಡುವ, ಕೀಳಾಗಿ ಕಾಣುವ, ದ್ವೇಷ ಪ್ರಚೋದಿಸುವ ಅಥವಾ ನೋವುಂಟುಮಾಡುವ ಹಾಡಿನ ಸಾಹಿತ್ಯ, ಸಂಭಾಷಣೆ, ಸನ್ನೆಗಳು, ವೇಷಭೂಷಣಗಳು ಅಥವಾ ಪ್ರದರ್ಶನಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಮೇಲಿನ ನಿಯಮಗಳ ಯಾವುದೇ ಉಲ್ಲಂಘನೆಯು ತಕ್ಷಣದ ಅನರ್ಹತೆಗೆ ಕಾರಣವಾಗುತ್ತದೆ.

ಅನ್ವಯಿಸುವ ಕಾನೂನಿನ ಪ್ರಕಾರ, ನಿಯಮ ಉಲ್ಲಂಘಿಸಿದ ಸ್ಪರ್ಧಿಗಳು ಮತ್ತು/ಅಥವಾ ಅವರ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಹಕ್ಕನ್ನು ಆಯೋಜಕ ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.

ಅನರ್ಹತೆಗೆ ಸಂಬಂಧಿಸಿದಂತೆ ಆಯೋಜನಾ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

11. ತೀರ್ಪುಗಾರರ ನಿರ್ಧಾರ

1. ನೇಮಕಗೊಂಡ ತೀರ್ಪುಗಾರರ ನಿರ್ಧಾರವೇ ಅಂತಿಮ ಮತ್ತು ಎಲ್ಲರಿಗೂ ಬದ್ಧವಾಗಿರುತ್ತದೆ.
2. ತೀರ್ಪುಗಾರರು ನೀಡಿದ ಅಂಕಗಳನ್ನು ಬದಲಾಯಿಸುವಂತೆ ಯಾವುದೇ ವಿವಾದ, ವಾದ ಅಥವಾ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

3. ಸ್ಪರ್ಧೆಯ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ಪ್ರದರ್ಶನವನ್ನು ತಕ್ಷಣ ನಿಲ್ಲಿಸುವ ಅಧಿಕಾರ ಆಯೋಜನಾ ಸಮಿತಿಗೆ ಇರುತ್ತದೆ.

12. ಸಾಮಾನ್ಯ ಸೂಚನೆಗಳು

1. ಭಾಗವಹಿಸುವ ಕಾಲೇಜುಗಳು ತಮ್ಮ ವಿದ್ಯಾರ್ಥಿಗಳ ಶಿಸ್ತು ಮತ್ತು ನಡವಳಿಕೆಗೆ ಜವಾಬ್ದಾರರಾಗಿರುತ್ತವೆ.
2. ಸ್ಪರ್ಧಿಗಳು ತಮ್ಮ ವೇಷಭೂಷಣ, ಪ್ರಯಾಣ ಮತ್ತು ವೈಯಕ್ತಿಕ ಅಗತ್ಯಗಳಿಗೆ ಸ್ವತಃ ವ್ಯವಸ್ಥೆ ಮಾಡಿಕೊಳ್ಳಬೇಕು.
3. ವೈಯಕ್ತಿಕ ವಸ್ತುಗಳ ನಷ್ಟಕ್ಕೆ ಆಯೋಜಕರು ಜವಾಬ್ದಾರರಾಗಿರುವುದಿಲ್ಲ.
4. ವೇದಿಕೆ ಅಥವಾ ಉಪಕರಣಗಳಿಗೆ ಉಂಟುಮಾಡುವ ಹಾನಿಗೆ ಸಂಬಂಧಪಟ್ಟ ಸ್ಪರ್ಧಿಗಳು ಜವಾಬ್ದಾರರಾಗಿರುತ್ತಾರೆ.
5. ಕಾರ್ಯನಿರ್ವಹಣಾ ಅಥವಾ ಸುರಕ್ಷತಾ ಕಾರಣಗಳಿಂದ ಕಾರ್ಯಕ್ರಮದ ವೇಳಾಪಟ್ಟಿಯನ್ನು ಬದಲಾಯಿಸುವ ಹಕ್ಕನ್ನು ಆಯೋಜನಾ ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸ್ಪರ್ಧೆಯ ನಗದು ಬಹುಮಾನಗಳು

ಪ್ರಥಮ ಬಹುಮಾನ

₹10,000

ದ್ವಿತೀಯ ಬಹುಮಾನ

₹6,000

ತೃತೀಯ ಬಹುಮಾನ

₹3,000

ಕಡ್ಡಾಯ ಘೋಷಣೆ

ಈ ಸ್ಪರ್ಧೆಗೆ ನೋಂದಾಯಿಸಿಕೊಳ್ಳುವ ಮೂಲಕ ಭಾಗವಹಿಸುವ ಕಾಲೇಜು ಮತ್ತು ಅದರ ತಂಡದ ಎಲ್ಲ ಸದಸ್ಯರು ಸ್ಪರ್ಧೆಯ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳನ್ನು ಓದಿ, ಅರ್ಥಮಾಡಿಕೊಂಡು, ಅವುಗಳನ್ನು ಪಾಲಿಸಲು ಒಪ್ಪಿಕೊಂಡಿರುವುದಾಗಿ ದೃಢೀಕರಿಸುತ್ತಾರೆ.

“ಭಾಗವಹಿಸುವಿಕೆ ವ್ಯಕ್ತಿತ್ವ ಮತ್ತು ಸೃಜನಶೀಲತೆ ಬೆಳೆಸುತ್ತದೆ !”

Winning earns a trophy. Participation builds character!

ಆಯೋಜಕರು: ಯುನಿವರ್ಸಲ್ ಪಿಯು ಕಾಲೇಜು, ಬೆಂಗಳೂರು